ಮಾಡ್ತಿದ್ದಾನೆ. ಕೆಲವು ದಿನ ಅವನು ಸ್ಕೂಲಿಗೆ ಹೋಗಲಿಲ್ಲ. ಅಟ್ಟದ ಮೇಲಿನ ರೂಮಿನಲ್ಲಿ ತಲೆಗೆ ಬಟ್ಟೆ ಕಟ್ಟಿಕೊಂಡು ಹಾಡು, ಕುಣಿತ ನಡೆಸ್ತಾ ಇದ್ದ. ಕೇಳಿದರೆ ಹೇಳುತ್ತಿದ್ದ, "ನಾವು ಬ್ರೋಕನ್ ಫ್ಯಾಮಿಲಿ ಹುಡುಗರು ಸೇರಿ ಒಂದು ಮ್ಯೂಸಿಕ್ ಬ್ಯಾಂಡ್ ಕಟ್ತೀವಿ".

"ಬ್ಯಾಂಡ್! ಕಟ್ಟಿ ಏನ್ ಮಾಡ್ತೀಯಾ?"

"ನೀನು ಬೀಟಲ್ಸ್ ಹೆಸರು ಕೇಳಿದಿಯಾ?"

"ಇಲ್ಲ. ನಾನಂತೂ ಚೋಟುದ್ದ ಹುಡುಗಿ, ನನಗೇನು ಗೊತ್ತಪಾ?"

"ತಮಾಷೆ ಮಾಡ್ತಿದಿಯಾ? ನಾನಂತೂ ಅವರ ಕತೆ ಕೇಳಿ ಶರಣಾಗಿಬಿಟ್ಟಿದಿನಿ. ಲಂಡನ್ನಿನ ಲಿವರ್ಪೂಲ್‌ನ ಒಡೆದ ಕುಟುಂಬದ ನಾಲ್ಕು ಹುಡುಗರು, ತಂದೆತಾಯಿ ನಡುವೆ ನಡೀತಿದ್ದ ಜಗಳದಿಂದಾಗಿ ಮನೆಯಲ್ಲಿ ಇರೋಕಾಗಲಿಲ್ಲ. ಮನಸ್ಸಿನ ದುಃಖ ಹೊರಹಾಕಲು ಹಾಡು ಹಾಡ್ತಾ ಹಾಡ್ತಾ ಒಂದು ದಿನ ಜಗತ್ತಿನಲ್ಲೇ ಫೇಮಸ್ಸಾಗಿಬಿಟ್ರು. ಪಿಲ್ಟು ಹೇಳಿದ್ದಾನೆ, ನಾವೂ ನಮ್ಮ ದುಃಖನಾ ಈ ರೀತಿ ಜಯಿಸೋಣ ಅಂತ."

"ರಾನಾ!"

"ನನಗೆ ಗೊತ್ತು ದೀದಿ. ನಮ್ಮ ಪ್ಲಾನ್ ನಿನಗೆ ಇಷ್ಟ ಆಗೋಲ್ಲ."

"ರಾನಾ ನೀನು ಇದೆಲ್ಲ ಮಾಡ್ತಿದ್ರೆ ಸರಿಯಾಗಿ ಓದೋಕೆ ಆಗಲ್ಲ."

"ಬಿಟ್ಟು ಬಿಡ್ತೀನಿ. ಪಿಲ್ಟು ಹೇಳಿದಾನೆ. ಸಾಧನೆ ಮಾಡ್ಬೇಕಾದ್ರೆ ಎಷ್ಟೊಂದು ತ್ಯಾಗ ಮಾಡಬೇಕಾಗುತ್ತೆ ಅಂತ."

"ಸರಿ, ಬಿಟ್ಟುಬಿಡು. ಆದರೆ, ಈಗಲ್ಲ. ಮೊದಲು ದೊಡ್ಡವನಾಗು, ಬೀಟಲ್ಸ್‌ನಲ್ಲಿ ಯಾರೂ ನಿನ್ನ ಥರ ಚಿಕ್ಕ ಹುಡುಗರಾಗಿರಲಿಲ್ಲ."

"ಹೌದಲ್ವಾ! ಪಿಲ್ಟು ಈ ಥರ ಯೋಚನೇನೆ ಮಾಡಿಲ್ಲ, ನಾನೂ."

"ಪ್ಲೀಸ್ ರಾನಾ, ಇನ್ನೂ ಟೈಮಿದೆ. ನಿಧಾನ ಮಾಡು. ಅಮ್ಮನಿಗೆ ಗೊತ್ತಾದರೆ..."

ಏನಾಗುತ್ತೆ ಅಂತ ಭಯ ಇತ್ತೋ ಅದೇ ಆಯ್ತು. ಚೂರ್ಣಿಯಮ್ಮ ಹತ್ತಿರ ಎಲ್ಲ ಕೇಳಿ ಅಮ್ಮ ರಾನಾಗೆ ಚೆನ್ನಾಗಿ ಕೊಟ್ಟು ಹೇಳಿದಳು, "ಇನ್ಮೇಲೆ ಯಾವತ್ತೂ ಹೀಗೆ ಮಾಡ್ಬೇಡ. ಎಲ್ಲಿ ಪ್ರಾಮಿಸ್ ಮಾಡು!"

ರಾನಾ ಕತ್ತು ಹೊರಳಿಸಿ ಅಮ್ಮನನ್ನೇ ತೀಕ್ಷ್ಣವಾಗಿ ನೋಡುತ್ತಿದ್ದವನು, ನೋಡುತ್ತಲೇ ಇದ್ದ. ಹಟವಾದಿಯಂತೆ ನುಡಿದ, "ಇಲ್ಲ. ನಾನು ಪ್ರಾಮಿಸ್ ಮಾಡೋದಿಲ್ಲ".

"ರಾನಾ! ನಿನಗೆ ಗೊತ್ತೇ, ಏನ್ ಮಾತಾಡ್ತಿದಿಯಾ ಅಂತ?" ಅಮ್ಮನ ಧ್ವನಿ ತಣ್ಣಗಿತ್ತು.

ಇನ್ನು ಸ್ವಲ್ಪ ಹೊತ್ತಾಗಿದ್ದರೆ ಗೋಡೆಯ ಮೇಲಿನ ಬ್ಯಾಡಮಿಂಟನ್ ರಾಕೆಟ್ ಅಮ್ಮನ ಕೈಗೆ ಬರ್ತಿತ್ತು. ಸೈಫುಲ್ ಅಂಕಲ್ ಬಂದು ನಿಲ್ಲಿಸಿದರು. "ಮಕ್ಕಳ ಜೊತೆ ನೀನು ಮಕ್ಕಳಂಗೆ ಆಡೋಕೆ ಶುರು ಮಾಡಿದೆಯಾ! ಈ ವಿಚಾರದಲ್ಲಿ ನೀನು ತಾಳ್ಮೆಯಿಂದಿರಬೇಕು. ಕೋಪ ಮಾಡ್ಕೊಂಡ್ರೆ ನಡೆಯಲ್ಲ."

"ನನ್ನ ತಾಳ್ಮೆಯೆಲ್ಲವನ್ನೂ ಒಬ್ಬ ನಾಶ ಮಾಡಿ ಹೊರಟು ಹೋಗಿದ್ದಾನೆ" ಪಕ್ಕದ ರೂಮಲ್ಲಿ ಅಮ್ಮ ಅಳುತ್ತಿದ್ದಳು. ಇಲ್ಲಿ ರಾನಾ ಅಳ್ತಾ ಇದ್ದ. ರಾಕಾ ಅಳ್ತಾ ಇರಲಿಲ್ಲ. ಅವಳ ಕಣ್ಣಲ್ಲಿ ಮುರಿದುಹೋದ ಚಿತ್ರಗಳು ಸುಳಿಯುತ್ತಿದ್ದವು. ಅಮ್ಮ ಮೊದಲು ಶಾಂತವಾಗಿಯೇ ಇದ್ದಳು. ಆದರೆ, ಬಾಬಾನ ಬೇಜವಾಬ್ದಾರಿ ವರ್ತನೆಗಳಿಂದ ಬದಲಾಗುತ್ತಿದ್ದಳು. ಬಾಬಾ ಆಗಾಗ್ಗೆ ಆಫೀಸಿಗೆ ಹೋಗ್ತಾನೆ ಇರಲಿಲ್ಲ. ಇಡೀ ದಿನ ಹಾಡು ಹೇಳಿಕೊಂಡು ಕುಳಿತಿರುತ್ತಿದ್ದ. ಕಂಠವೇನೂ ಬಹಳ ಚೆನ್ನಾಗಿರಲಿಲ್ಲ. ಆದರೆ, ಒಂದೇ ಸಮ ಗಂಟೆಗಟ್ಟಲೆ ಹಾಡುತ್ತಿದ್ದ. ಮಧ್ಯಾಹ್ನವಾದರೆ ಸಾಕು ಭಾರಿ ಖುಷಿಯಿಂದ ಹೇಳುತ್ತಿದ್ದ, "ನಡೀರಿ, ಎಲ್ಲರೂ ಜಯದೇವಪುರ್ ಪಾರ್ಕ್ ಸುತ್ತಾಡಿಕೊಂಡು ಬರೋಣ".